ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ನೆರೆ ಪರಿಹಾರದ ಅನುದಾನ ಹಂಚಿಕೆ ಕುರಿತು

ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-

187 (231) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2019ರ ಆಗಸ್ಟ್ ತಿಂಗಳಲ್ಲಿ ಸುರಿದ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಆದ ವ್ಯಾಪಕ ಹಾನಿಯಲ್ಲಿ ಸಂಪರ್ಕ ಕಳೆದುಕೊಂಡ ಸೇತುವೆಗಳೆಷ್ಟು;

(ಆ) ಈ ಸೇತುವೆಗಳ ಪುನರ್ ನಿರ್ಮಾಣ/ದುರಸ್ಥಿ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ಸಂಪೂರ್ಣ ನಾಶವಾದ ಮನೆಗಳು ಮತ್ತು ಭಾಗಶಃ ನಾಶವಾದ ಮನೆಗಳ ಸಂಖ್ಯೆ ಎಷ್ಟು;

(ಈ) ಒಟ್ಟು ಎಷ್ಟು ಮನೆಗಳಿಗೆ ಹಣ ಬಿಡುಗಡೆಗೊಳಿಸಲಾಗಿದೆ; ಫಲಾನುಭವಿಗಳ ಪಟ್ಟಿಯೊಂದಿಗೆ ಸಂಪೂರ್ಣ ವಿವರ ಒದಗಿಸುವುದು;

(ಉ) ಭೂ ಕುಸಿತದಿಂದ/ನೆರೆಯಿಂದ ನಿವೇಶನ ಕಳೆದುಕೊಂಡವರೆಷ್ಟು;

(ಊ) ನಿವೇಶನ ಕಳೆದುಕೊಂಡವರಿಗೆ ನಿವೇಶನ ಕಲ್ಪಿಸಲಾಗಿದೆಯೇ; ಅಂಕಿ-ಅಂಶಗಳ ಸಹಿತ ಸಂಪೂರ್ಣ ಮಾಹಿತಿ ನೀಡುವುದು;

(ಋ) ನೆರೆಯಿಂದ ಕೊಚ್ಚಿಹೋದ ಕೃಷಿ ಜಮೀನುಗಳು ಎಷ್ಟು; ಇದರಿಂದ ಆದ ನಷ್ಟವೆಷ್ಟು;

(ಎ) ಅತಿವೃಷ್ಠಿಯಿಂದಾದ ನಷ್ಟಕ್ಕೆ ಪರಿಹಾರ ಒದಗಿಸಲಾಗಿದೆಯೇ; ಒದಗಿಸಿದ್ದಲ್ಲಿ, ಫಲಾನುಭವಿU Àಳ ಸಂಖ್ಯೆ ಎಷ್ಟು? (ಫಲಾನುಭವಿಗಳ ಪಟ್ಟಿಯೊಂದಿಗೆ ಹಾಗೂ ಅಂಕಿ-ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)